ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

KARNATAKA REGIONAL ORGANISATION FOR SOCIAL SERVICE
KROSS

ಸಂಚಿಕೆ 18 ಜನವರಿ 2014 – ಮಾರ್ಚ್ 2014





ಮುಖ್ಯ ಸಂಪಾದಕರು
**ಸ್ವಾಮಿ ಪೀಟರ್ ಬ್ರ್ಯಾಂಕ್**

ಮುಖಪುಟ ವಿನ್ಯಾಸ
**ಅನೂಪ ಗ್ರಾಫಿಕ್ಸ್**

ಒಳ ಪುಟಗಳಲ್ಲಿ


**ಹಕ್ಕು ಆಧಾರಿತ ಸಾಮಾಜಿಕ ಪರಿವರ್ತನೆ : ಗ್ರಾಮ ಪಂಚಾಯಿತಿ ವ್ಯವಸ್ಥೆಯೊಳಗೆ ನಮ್ಮ ಹಕ್ಕುಗಳ ಚಲಾವಣೆ ಹೇಗೆ ?**

**ಏನಿದು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ**

**ಪ್ರಧಾನ ಮಂತ್ರಿಯವರ ಉದ್ಯೋಗ ಸೃಷ್ಟಿ ಕಾರ್ಯಕ್ರಮ**

**ವರ್ತಮಾನಕ್ಕೆ – ಒಂದು ಚಿಂತನ**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ಟೆಪ್ ಯೋಜನೆ**

**ಸುದ್ಧಿ ತಾಂಬೂಲ**

**ಏನಿದು ಪಶ್ಚಿಮ ಘಟ್ಟದ ಕುರಿತು ಕಸ್ತೂರಿ ರಂಗನ್ ವರದಿ?**


## ಓದುಗರೊಂದಿಗೆ ಕ್ಷಣ ಹೊತ್ತು ...

# ಸರ್ವ ಜನಾಂಗದ ಶಾಂತಿಯ ತೋಟ...

ಕನಸು ಕಾಣುವ ಮನಸ್ಸು ಇರುವ ವಯಸ್ಸು ಯೌವ್ವನ. ಪ್ರತಿಯೊಬ್ಬ ಯುವಕ / ಯುವತಿ ತನ್ನ ಯೌವ್ವನದಲ್ಲಿ ವಿಶೇಷವಾಗಿ ತಮ್ಮ ಭವಿಷ್ಯದ ಬಗ್ಗೆ, ಜೀವನದಲ್ಲಿ ತಾನು ಸಾಧಿಸಲಿಚ್ಛಿಸುವ ಕೆಲಸ ಕಾರ್ಯಗಳ ಬಗ್ಗೆ ಕನಸು ಕಾಣುತ್ತಾನೆ/ಳೆ. ಹಗಲು ಕನಸು ಕಾಣುವುದೇನೋ ಸುಲಭ, ಆದರೆ ನಿಜ ಜೀವನದಲ್ಲಿ ಅವುಗಳನ್ನು ಸಾಧಿಸುವುದು ಬಹು ದುಸ್ತರ. ಆಹ್ವಾನವನ್ನು ಪಂಥಾಹ್ವಾನವಾಗಿಸಿದರೆ ಅದು ಸಾಧಿಸಲು ಸಾಧ್ಯ. ಅದಕ್ಕಾಗಿಯೇ ಪ್ರತಿಯೊಬ್ಬರು ಕನಸು ಕಾಣಬೇಕು ಕಾರಣ 'You cannot rise above your dreams' ನೀವು ನಿಮ್ಮ ಕನಸುಗಳಿಗಿಂತ ಮೇಲೇರಲು ಸಾಧ್ಯವಿಲ್ಲ. ಓರ್ವ ವ್ಯಕ್ತಿ ತನ್ನ ಜೀವನದ ಕನಸು/ಗುರಿಯನ್ನು ಸ್ಪಷ್ಟಪಡಿಸಿಗೊಳ್ಳದಿದ್ದರೆ, ಯಾವುದೇ ಓರ್ವ ಸಂಸ್ಥೆಯ ನಿರ್ದೇಶಕ, ಓರ್ವ ಶಾಲೆಯ ಅಧ್ಯಾಪಕ, ಆ ಸಂಸ್ಥೆಯ/ಶಾಲೆಯ ಅಭ್ಯುದಯದ ಬಗ್ಗೆ ತನ್ನ ಕನಸುಗಳೂ ಏನೂ? ಆ ಗುರಿಯನ್ನು ಸೀಮಿತ ಅವಧಿಯೊಳಗೆ ಸಾಧಿಸಬೇಕಾದ ಕಾರ್ಯತಂತ್ರಗಳೇನೂ? ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೆ, ರೂಪುರೇಷೆಗಳನ್ನು ಹಾಕಿಕೊಳ್ಳದಿದ್ದರೆ, ಕನಸು ಕಂಡಿದ್ದನ್ನು ಸಾಧಿಸಲು ಸಾಧ್ಯವಿಲ್ಲ. ಇದು ಎಲ್ಲಾ ಸ್ತರದ ಜನರಿಗೂ ಅನ್ವಯಿಸುತ್ತದೆ. ಇದಕ್ಕೆ  ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಹೊರತಾಗಿಲ್ಲ.

ಲೋಕಸಭೆ ಚುನಾವಣೆ ಎಂಬ 'ಮಹಾಸಮರ' ಪ್ರಾರಂಭವಾಗಿದೆ. ಅಭ್ಯರ್ಥಿಗಳ 'ಬಿಗ್ ಫೈಟ್'ಗಳು ವಿವಿಧ ವಾಹಿನಿಗಳಲ್ಲಿ ಬಿತ್ತರಗೊಂಡು, ಅವರು ತಮ್ಮ ಕ್ಷೇತ್ರಕ್ಕಾಗಿ ಕಾಣುವ ಕನಸುಗಳು, ಆದ್ಯತೆಗಳು, ಆಗಬೇಕಾದ ಕೆಲಸಗಳ ಬಗ್ಗೆ ಸವಿಸ್ತಾರ ವರದಿಗಳಾಗುತ್ತಿವೆ. ಎಲ್ಲರೂ ಬಣ್ಣಬಣ್ಣದ ಗಾಳಿಪಟವನ್ನು ಹಾರಿಸುತ್ತಿದ್ದಾರೆ. ಮತಬಾಂಧವರು ಬಣ್ಣದ ಮಾತಿಗೆ ಮರುಳಾಗದೆ ಎಚ್ಚರವಹಿಸಿ ಕಳೆದ 5 ವರ್ಷ ಕೈಗೆ ಸಿಗದ, ಜನರ ಸಮಸ್ಯೆಗೆ ಸ್ಪಂಧಿಸದ, ದಿಲ್ಲಿಯಲ್ಲಿ ಕುಳಿತು ಹಳ್ಳಿ ಮರೆತ, ಚುನಾವಣೆ ಬಂದಾಗ ಬಣ್ಣದ ಗಾಳಿಪಟವನ್ನು ಹಾರಿಸುವ ಅಭ್ಯರ್ಥಿಗಳನ್ನು ದೂಳಿಪಟಗೊಳಿಸುವ ಸುವರ್ಣಾವಕಾಶ ಮತದಾರರ ಮುಂದಿದೆ ಎಂಬುದನ್ನು ಅರಿತುಕೊಳ್ಳಬೇಕು. ಬಣ್ಣದ ಮಾತಿಗೆ ಮರುಳಾಗದೆ, ಆಮೀಷಗಳಿಗೆ ಬಲಿಯಾಗದೆ ಮತವನ್ನು ಮೂರು ಕಾಸಿಗೆ ಮಾರಿಕೊಳ್ಳದೆ ಎಚ್ಚರದಿಂದ ಮತವನ್ನು ಚಲಾಯಿಸಬೇಕು. ಮತದಾನ ನಮ್ಮ ಹಕ್ಕು. ಸಂವಿಧಾನವನ್ನು ಕಾಪಾಡುವ ಏಕೈಕ ಅಸ್ತ್ರ. ಪ್ರತಿಯೊಬ್ಬರಿಗೂ ಒಂದೇ ಮತದ ಹಕ್ಕನ್ನು ನೀಡಿ ಸಂವಿಧಾನವು ಸಮಾನತೆಯನ್ನು ಸಾರಿದೆ. ಮತವನ್ನು ಮಾರಿದ್ದಲ್ಲಿ, ನಾವು ಗೌರವದಿಂದ ಬದುಕುವ, ನಮ್ಮ ಹಕ್ಕನ್ನು ಕೇಳುವ, ನಾವಾರಿಸಿದ ಪ್ರತಿನಿಧಿ ಜನಸೇವಕ / ಸೇವಕಿ ಯಾಗಿ ನಮ್ಮ ಕೆಲಸ ಕಾರ್ಯಗಳನ್ನು ಮಾಡಿಸುವ ಅವಕಾಶವನ್ನು ಕಳೆದುಕೊಳ್ಳತ್ತೇವೆ.

ನಮ್ಮ ದೇಶ, ಎಲ್ಲಾ ಜಾತಿ ಜನಾಂಗ, ಬಣ್ಣ, ಭಾಷೆ, ಧರ್ಮಗಳ ತೊಟ್ಟಿಲು. ಎಲ್ಲರಿಗೂ ಸಮಾನತೆಯನ್ನು, ಬದುಕಿ ಬಾಳುವ ಹಕ್ಕನ್ನು ಆತ್ಮ ಸಾಕ್ಷಿಯನ್ನು ಪಾಲಿಸಿ ತನ್ನ ದೇವರನ್ನು ಪೂಜಿಸುವ ಅವಕಾಶವನ್ನು ಒದಗಿಸಿದೆ. ಜಾತ್ಯಾತೀತ ಸಿದ್ಧಾಂತದ ಭದ್ರ ಬುನಾದಿಯ ಮೇಲೆ, ಸಂವಿಧಾನವು ರೂಪುಗೊಂಡಿದೆ. ಕುವೆಂಪುರವರ 'ಸರ್ವ ಜನಾಂಗದ ಶಾಂತಿಯ ತೋಟ'ವು ಕಿಂಚಿತ್ತು ಹಾಳಾಗದಂತೆ ನೋಡಿಕೊಳ್ಳುವ ಜಾತ್ಯಾತೀತ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿದೆ. ಇಂತಹ ಪ್ರಜಾಪ್ರಭುತ್ವದ ನೆಲೆಯಲ್ಲಿ ಕೋಮುಸಂಘರ್ಷಕ್ಕೆ ಎಡೆಯಿಲ್ಲ, ಒಡೆದು ಆಳುವ ನೀತಿಗೆ ಅವಕಾಶವಿಲ್ಲ. ಶಾಂತಿ–ಸಾಮರಸ್ಯ ಕೆಡವಂತವರನ್ನು ಅಧಿಕಾರದಿಂದ ದೂರವಿಡಬೇಕಾಗಿದೆ. ಎಲ್ಲಾ ಜನರ ಅಭಿವೃದ್ಧಿಗೆ, ನೆಮ್ಮದಿಗೆ ಶ್ರಮಿಸುವಂತಹವರಿಗೆ ಮತ ಚಲಾಯಿಸ ಬೇಕಾಗಿದೆ.
ಈ ನಿಟ್ಟಿನಲ್ಲಿ ಈ ಸಂಚಿಕೆಯ 'ಪ್ರಸ್ತುತಿ' ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಯಥಾ ಪ್ರಕಾರ 'ಅಲೆಗಳು' ಸರ್ಕಾರಿ ಸೌಲಭ್ಯ, ಸುದ್ದಿ ತಾಂಬೂಲ ಇತ್ಯಾದಿಗಳ ಅಲೆಗಳನ್ನು ಹೊತ್ತು ತಂದಿದ್ದಾಳೆ. ತಪ್ಪದೆ ಮತ ಚಲಾಯಿಸಿ, ಇದು ನಿಮ್ಮ ಹಕ್ಕು ಹಾಗೂ ಕರ್ತವ್ಯ. ರಾಷ್ಟ್ರ ನಿರ್ಮಾಣಕ್ಕೆ ಪಣತೊಡಿರಿ.

ಬೇಸಿಗೆಯ ದಾಹ ಅಧಿಕವಾಗಿದೆ, ಕಾರಣ ಹುಡುಕಿ ಶ್ರಮಿಸಬೇಕಾಗಿದೆ. ಸಾಲು ಸಾಲು ರಜೆಗಳು ಬರುತ್ತಿವೆ ಮತ ಚಲಾಯಿಸದೆ ಮೈ ಮರೆಯಿದಿರಿ, ನಿಮಗೆ ಶುಭಾಶಯಗಳು.

ಇಂತೀ,
**ವಂ. ಸ್ವಾಮಿ. ಪೀಟರ್ ಬ್ರ್ಯಾಂಕ್**
ನಿರ್ದೇಶಕರು, ಕ್ರಾಸ್ ಸಂಸ್ಥೆ.

# ಹಕ್ಕು ಆಧಾರಿತ ಸಾಮಾಜಿಕ ಪರಿವರ್ತನೆ : ಗ್ರಾಮ ಪಂಚಾಯಿತಿ ವ್ಯವಸ್ಥೆಯೊಳಗೆ ನಮ್ಮ ಹಕ್ಕುಗಳ ಚಲಾವಣೆ ಹೇಗೆ ?

## ಪ್ರಶಿಕ್ಷಣ ಮಾಲೆ

ಶ್ರೀ ಡೇವಿಡ್ ಕುಮಾರ್, ಬೆಂಗಳೂರು

ಸ್ಥಳೀಯ ಸಂಸ್ಥೆಗಳನ್ನು 'ಪ್ರಜಾಪ್ರಭುತ್ವದ ಪಾಠಶಾಲೆ'ಗಳೆಂದು ಕರೆಯಲಾಗುತ್ತದೆ. ಸಂವಿಧಾನದ 73 ನೇ ತಿದ್ದುಪಡಿಯೊಂದಿಗೆ ಪ್ರತಿನಿಧಿ ಪ್ರಜಾಪ್ರಭುತ್ವವು (Participatory Democracy) ಸಹಭಾಗಿತ್ವದ ಪ್ರಜಾಪ್ರಭುತ್ವವಾಗಿ (Representative Democracy) ಪರಿವರ್ತನೆಯಾಗಿದೆ. ಈ ಮೂಲಕ ಗ್ರಾಮ ಪಂಚಾಯಿತಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಲಾಗಿದ್ದು ಈ ಮೂಲಕ ಅಧಿಕಾರದ ವಿಕೇಂದ್ರಿಕರಣವಾಗಿ ಪ್ರಜೆಗಳು ನೇರವಾಗಿ ತಮ್ಮ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವ ಅವಕಾಶ ಮತ್ತು ವೇದಿಕೆ ಸಿದ್ಧವಾಗಿದೆ. ನಮ್ಮ ಸಂವಿಧಾನದ ಮೂರನೇ ಭಾಗದಲ್ಲಿ ಪ್ರಸ್ತಾಪಿಸಲಾಗಿರುವ ಮೂಲಭೂತ ಹಕ್ಕುಗಳಲ್ಲಿ ಅತೀ ಮುಖ್ಯವಾದದ್ದು ಜೀವಿಸುವ ಹಕ್ಕು (ಅನುಚ್ಛೇದ 21). ಸರ್ವೋಚ್ಚ ನ್ಯಾಯಾಲಯದಲ್ಲಿ ಹೊರಬಿದ್ದ ನಾನಾ ತೀರ್ಪುಗಳು ಇದರ ಪ್ರಾಮುಖ್ಯತೆ ಮತ್ತು ವ್ಯಾಪ್ತಿಯನ್ನು ಎತ್ತಿ ಹಿಡಿದಿವೆ. 1978ರಲ್ಲಿ ಹೊರಬಿದ್ದ ಒಂದು ಐತಿಹಾಸಿಕ ತೀರ್ಪು (ಮೇನಕ ಗಾಂಧಿ / ಕೇಂದ್ರ ಸರ್ಕಾರ) ಒಬ್ಬ ವ್ಯಕ್ತಿಗೆ ಕೇವಲ ಬದುಕಲು ಮಾತ್ರವಲ್ಲ ಬದಲಾಗಿ 'ಘನತೆಯಿಂದ ಬದುಕುವ' ಮತ್ತು ಆತನ/ ಆಕೆಯ ಸ್ವಾತಂತ್ರ್ಯ ಕೇವಲ ದೈಹಿಕ/ಭೌತಿಕಕ್ಕೆ ಸೀಮಿತವಾಗಿರದೇ ಮಾನಸಿಕ, ಸಾಮಾಜಿಕ, ಆರ್ಥಿಕ ಹಾಗು ಅಧ್ಯಾತ್ಮಿಕಕ್ಕೂ ವ್ಯಾಪಿಸಿಕೊಂಡಿರುತ್ತದೆ ಎಂದು ಪ್ರತಿಪಾದಿಸುತ್ತದೆ. ಆದ್ದರಿಂದ ಪ್ರತಿ ಪ್ರಜೆಯೂ ಘನತೆಯಿಂದ ಬದುಕಲು ಬೇಕಾದ ವಸತಿ, ಪೌಷ್ಟಿಕ ಆಹಾರ,ನೀರು, ಶಿಕ್ಷಣ, ಚಿಕಿತ್ಸೆ, ಉದ್ಯೋಗ,ಆರೋಗ್ಯಪೂರ್ಣ ವಾತಾವರಣ ಇತ್ಯಾದಿಗಳು ಕೆಳಮಟ್ಟದಲ್ಲಿಯೇ ಲಭ್ಯವಾಗುವಂತೆ ಸಾಂವಿಧಾನಿಕವಾದ ವ್ಯವಸ್ಥೆಯನ್ನು ರೂಪಿಸಲಾಗಿದೆ.

**ವಸತಿಯ ಹಕ್ಕು:** ರಕ್ಷಣೆ ಮತ್ತು ಮಾನವ ಘನತೆಗೆ ಅವಶ್ಯವಾದ ವಾಸದ ಮನೆಯನ್ನು ಪಡೆಯಲು ಬಡವರಿಗೆ ಹಕ್ಕಿದೆ. ಊರಿಂದ ಊರಿಗೆ ಅಲೆಯುವ ಅಲೆಮಾರಿ ಸಮುದಾಯದವರಿಗೂ ಒಂದು ನಿರ್ದಿಷ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆಗಳನ್ನು ಪಡೆಯಬಹುದಾಗಿದೆ. 'ಗ್ರಾಮೀಣ ಆಶ್ರಯ ಯೋಜನೆ'ಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿದ್ದು ಗ್ರಾಮೀಣ ಪ್ರದೇಶದ ಬಡವರ್ಗ ಮತ್ತು ವಸತಿರಹಿತರು ಮನೆಗಳನ್ನು ಪಡೆಯುವ ಹಕ್ಕನ್ನು ನೀಡಲಾಗಿದೆ. ಇದರಲ್ಲಿ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರೇ ಆಗಿದ್ದು ಪರಿಶಿಷ್ಟ ಜಾತಿಯವರಿಗೆ ಶೇ. 40%, ಪರಿಶಿಷ್ಟ ಪಂಗಡದವರಿಗೆ ಶೇ.10 ಮತ್ತು ಸಾಮಾನ್ಯ ವರ್ಗದವರಿಗೆ ಶೇ.50 ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಇದೇ ರೀತಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ/ಪಂಗಡದವರು, ವಿಮುಕ್ತಿಗೊಂಡ ಜೀತದಾಳುಗಳು, ಅಂಗವಿಕಲರು ವಸತಿಯ ಹಕ್ಕನ್ನು ಪಡೆಯಬಹುದಾಗಿದೆ.

**ಕುಡಿಯುವ ನೀರಿನ ಹಕ್ಕು:** ನೀರು ನಮ್ಮ ಜೀವ ಸೆಲೆ. ಇದನ್ನು ಗ್ರಾಮ ಪ್ರದೇಶದ ಪ್ರತಿ ವ್ಯಕ್ತಿಗಳಿಗೆ ಒದಗಿಸುವುದು ಗ್ರಾಮ ಪಂಚಾಯಿತಿಯ ಕರ್ತವ್ಯ, ಪಡೆದುಕೊಳ್ಳುವುದು ಪ್ರತಿಯೊಬ್ಬರ ಹಕ್ಕು. ಈ ಕರ್ತವ್ಯವನ್ನು ನೆರವೇರಿಸುವ ಸಲುವಾಗಿ ಪ್ರತಿ ಗ್ರಾಮ ಪಂಚಾಯಿತಿಯು ಶುದ್ಧವಾದ ಮತ್ತು ಸಾಕಷ್ಟು ಪ್ರಮಾಣದ ನೀರು ಸರಬರಾಜು ಮಾಡಲು ಕೆರೆ, ಬಾವಿ, ತೊರೆ, ಜಲ ಮಾರ್ಗವನ್ನು ನಿರ್ಮಿಸಿ, ದುರಸ್ತಿಗೊಳಿಸಬಹುದಾದ ಅಧಿಕಾರವನ್ನು ಹೊಂದಿರುತ್ತಾರೆ.

**ಸ್ವಚ್ಛತೆ ಮತ್ತು ನೈರ್ಮಲ್ಯದ ಹಕ್ಕು:** ನಿರ್ಮಲವಾದ ವಾತಾವರಣದಲ್ಲಿ ಬದುಕುವ ಹಕ್ಕು ಪ್ರತಿಯೊಬ್ಬರಿಗಿದ್ದು ಇದನ್ನು ಸಾಕಾರಗೊಳಿಸಲು ಗ್ರಾಮ ಪಂಚಾಯಿತಿಯ ಶೇಕಡ ಹತ್ತುರಷ್ಟು ಮನೆಗಳಿಗೆ ಶೌಚಗೃಹಗಳನ್ನು ನೀಡಬೇಕಾಗುತ್ತದೆ. ಎಲ್ಲಿ ಸಮುಚ್ಚಯ ಮಾದರಿಯ ಮನೆಗಳಿರುತ್ತವೆಯೋ ಅಲ್ಲಿ ಸಮುದಾಯ ನೈರ್ಮಲ್ಯವನ್ನು ಒದಗಿಸಬೇಕಾಗುತ್ತದೆ. ಅಲ್ಲದೇ ಇಡೀ ಗ್ರಾಮಕ್ಕೆ ಚರಂಡಿ ವ್ಯವಸ್ಥೆಯನ್ನು ನಿರ್ಮಿಸಿ ನೈರ್ಮಲ್ಯ ಕಾಪಾಡುವ ಜವಾಬ್ದಾರಿ ಗ್ರಾಮ ಪಂಚಾಯಿತಿಗೆ ಇದೆ.

**ಉದ್ಯೋಗದ ಹಕ್ಕು** :ಗ್ರಾಮೀಣ ಬಡವರು ಉದ್ಯೋಗವನ್ನು ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗದೇ ತಮ್ಮದೇ ಆದ ಗ್ರಾಮಗಳಲ್ಲಿ ಕೆಲಸವನ್ನು ಮಾಡಿ ಘನತೆಯಿಂದ ಜೀವಿಸುವ ಹಕ್ಕುದಾರರಾಗಿರುತ್ತಾರೆ. ಈ ಹಕ್ಕು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಮುಖೇನ ಸಾಕಾರಗೊಳ್ಳುತ್ತಿದ್ದು ಇದೊಂದು ಶಾಸನಬದ್ಧವಾಗಿದೆ. ಉದ್ಯೋಗವನ್ನು ನೀಡುವಲ್ಲಿ ಗ್ರಾಮ ಪಂಚಾಯ್ತಿಯು ವಿಫಲ ವಾದರೆ ಇದನ್ನು ಜಾರಿಗೊಳಿಸಲು ನ್ಯಾಯಾಲದ ಮೊರೆ ಹೋಗಬಹುದು. ಅರ್ಜಿ ನೀಡಿದರೂ ಉದ್ಯೋಗವನ್ನು ಪಡೆಯಲು ವಿಳಂಬವಾದಾಗ ನಿರುದ್ಯೋಗ ಭತ್ಯೆಯನ್ನೂ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

**ಇತರ ಮೂಲ ಸೌಕರ್ಯಗಳ ಹಕ್ಕು:**
ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜೀವಿಸುವ ಪ್ರತಿಯೋರ್ವರು ತಮ್ಮ ಸರ್ವತೋಮುಕ ಬೆಳವಣಿಗೆಯ ಹಕ್ಕನ್ನು ಹೊಂದಿದ್ದು ಈ ಕೆಳಗಿನ ವ್ಯವಸ್ಥೆಯ ಮೂಲಕ ಪಡೆಯಬಹುದು.

**ಉತ್ಪಾದನಾ ಸಮಿತಿಯ** ಮೂಲಕ ತಮ್ಮ ಕೃಷಿ ಉತ್ಪಾದನೆ, ಪಶು ಸಂಗೋಪನೆ, ಗ್ರಾಮಾಂತರ ಕೈಕಾರಿಕೆ, ಮತ್ತು ಬಡತನದಿಂದ ನಿವಾರಣೆ ಹೊಂದುವ ಹಕ್ಕು ಮತ್ತು ಅವಕಾಶವಿದೆ, ಈ ಸಮಿತಿಗೆ ಸಾರ್ವಜನಿಕ ರಸ್ತೆ ನಿರ್ಮಾಣ, ದುರಸ್ತಿ, ಆರೋಗ್ಯ ಸುರಕ್ಷತೆ, ಮತ್ತು ಆರ್ಥಿಕ ಉನ್ನತಿಯನ್ನು ಸಾಧಿಸುವ ಜವಾಬ್ದಾರಿಯಿದೆ.

**ಸೌಕರ್ಯ ಸಮಿತಿಯ** ಮೂಲಕ ನಮ್ಮ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ಪಡೆಯಬುದುದು.

**ಸಾಮಾಜಿಕ ನ್ಯಾಯ ಸಮಿತಿಯ** ಮೂಲಕ ಪರಿಶಿಷ್ಟ ಜಾತಿ/ಪಂಗಡಗಳು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ನ್ಯಾಯವನ್ನು ಪಡೆದು ಅನ್ಯಾಯ ಮತ್ತು ಶೋಷಣೆಯನ್ನು ತಡೆಗಟ್ಟುವ ಹಕ್ಕನ್ನು ನೀಡಲಾಗಿದೆ.

ಮುಂದುವರೆಯುವುದು. . .

Embrace the Challenge
what the mind can convince
& believe it can achieve.

# ಪ್ರಧಾನ ಮಂತ್ರಿಯವರ ಉದ್ಯೋಗ ಸೃಷ್ಟಿ ಕಾರ್ಯಕ್ರಮ

## (ಪಿ.ಎಮ್.ಇ.ಜಿ.ಪಿ)

ಜಿ. ಯಂ. ವರ್ಗೀಸ್
ಕ್ರಾಸ್ ಸಂಸ್ಥೆ

ಪ್ರಧಾನ ಮಂತ್ರಿಯವರ ಉದ್ಯೋಗ ಸೃಷ್ಟಿ ಕಾರ್ಯಕ್ರಮ (ಪಿ.ಎಮ್. ಇ .ಜಿ. ಪಿ), ಭಾರತ ಸರ್ಕಾರದ ಎಮ್. ಎಸ್. ಎಮ್. ಇ. ಮಂತ್ರಾಲಯದಿಂದ ಇದೊಂದು ಕ್ರಾಂತಿಕಾರಿ ತೀರ್ಮಾನ. ಈ ಮೊದಲು ಇದ್ದ ಪ್ರಧಾನ ಮಂತ್ರಿಯವರ ರೋಜಗಾರ ಯೋಜನೆ ಮತ್ತು ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ ಇವುಗಳೆರಡರ ಸಮ್ಮಿಲನವೇ ಪ್ರಧಾನ ಮಂತ್ರಿಯವರ ಉದ್ಯೋಗ ಸೃಷ್ಟಿ ಕಾರ್ಯಕ್ರಮ (ಪಿ. ಎಮ್. ಇ .ಜಿ. ಪಿ).

**ನೋಡಲ್ ಸಂಸ್ಥೆ:**

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಈ ಕಾರ್ಯಕ್ರಮ ದೇಶದಾದ್ಯಂತ ಅನುಷ್ಠಾನಗೊಳಿಸುವ ರಾಷ್ಟ್ರ ಮಟ್ಟದ ನೋಡಲ್ ಸಂಸ್ಥೆಯಾಗಿದೆ.

**ಅನುಷ್ಠಾನ ಸಂಸ್ಥೆ ಮತ್ತು ಕಾರ್ಯವ್ಯಾಪ್ತಿ:**

ಗ್ರಾಮೀಣ ಮಟ್ಟದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (ಕೆ.ವಿ.ಐ.ಸಿ) ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಸಮಿತಿ (ಕೆ.ವಿ.ಐ.ಬಿ) ಹಾಗು ಜಿಲ್ಲಾ ಕೈಗಾರಿಕಾ ಕೇಂದ್ರ(ಡಿ.ಐ. ಸಿ.) ನಗರ/ಪಟ್ಟಣ ಪ್ರದೇಶಗಳಲ್ಲಿನ ಅನುಷ್ಠಾನ ಸಂಸ್ಥೆಗಳಾಗಿವೆ.

**ಗರಿಷ್ಠ ಯೋಜನಾ ಗಾತ್ರ:**

ಸೇವಾ ವಲಯಕ್ಕೆ ರೂ.10 ಲಕ್ಷ ಮತ್ತು ಉತ್ಪಾದನಾ ವಲಯಕ್ಕೆ ರೂ.25 ಲಕ್ಷವಾಗಿರುತ್ತದೆ.

**ವಿದ್ಯಾರ್ಹತೆ:**

ಕನಿಷ್ಟ ವಿದ್ಯಾರ್ಹತೆ 8ನೇ ತರಗತಿ ತೇರ್ಗಡೆಯಾಗಿರಬೇಕು. ಸೇವಾ ವಲಯ ಯೋಜನೆ ರೂ. 5 ಲಕ್ಷ ಮತ್ತು ಉತ್ಪಾದನಾ ವಲಯ ಯೋಜನೆಗೆ ರೂ.10 ಲಕ್ಷ .

**ಉಧ್ಯಮ ಅಭಿವೃದ್ಧಿ ಕಾರ್ಯಕ್ರಮ ತರಬೇತಿ:( ಇ.ಡಿ.ಪಿ.)**

ಉತ್ಪಾದನಾ ವಲಯ ಯೋಜನೆ ಆಯ್ಕೆ ಮಾಡಿದವರು ಎರಡು ವಾರಗಳ ಉಧ್ಯಮ ಅಭಿವೃದ್ಧಿ ಕಾರ್ಯಕ್ರಮ ತರಬೇತಿಯಲ್ಲಿ ಕಡ್ಡಾಯವಾಗಿ ಭಾಗವಹಿಸಿರಬೇಕು. ಸೇವಾವಲಯ ಯೋಜನೆ ಆಯ್ಕೆ ಮಾಡಿದವರು ಕಡ್ಡಾಯವಾಗಿ 3 ದಿನಗಳ ತರಬೇತಿಯಲ್ಲಿ ಭಾಗವಹಿಸಿರಬೇಕು. ಬ್ಯಾಂಕಿನಿಂದ ಯೋಜನೆಗೆ ಹಣ ಮಂಜೂರಾದ 12 ತಿಂಗಳೊಳಗೆ ಮೇಲಿನ ತರಬೇತಿಯಲ್ಲಿ ಕಡ್ಡಾಯವಾಗಿ ಭಾಗವಹಿಸಿರಬೇಕು. ಈ ಮೊದಲೇ ತರಬೇತಿ ಹೊಂದಿದವರಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

**ಅರ್ಜಿ ಸಲ್ಲಿಸುವ ವಿಧಾನ:**

ಯೋಜನೆಯ ಬಗ್ಗೆ ವಾರ್ತಾಪತ್ರಿಕೆಯಲ್ಲಿ ಮತ್ತು ವಿಧ್ಯುನ್ಮಾನ ಮಾಧ್ಯಮದಲ್ಲಿ ಎಪ್ರಿಲ್–ಮೇ ತಿಂಗಳುಗಳಲ್ಲಿ (ಹೆಚ್ಚಿನಾಂಶ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ) ಪ್ರಕಟಿಸಲಾಗುವುದು. ಅರ್ಹ ವ್ಯಕ್ತಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ತಮ್ಮ ಸಮೀಪದ (ಕೆ.ವಿ.ಐ.ಸಿ)/ (ಕೆ.ವಿ.ಐ.ಬಿ)/ (ಡಿ.ಐ. ಸಿ.) ಅಥವಾ ಬ್ಯಾಂಕುಗಳ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

**ಏನೆಲ್ಲಾ ದಾಖಲೆಗಳು ಇರಬೇಕು?**

- ವಿದ್ಯಾರ್ಹತೆಯ ಧೃಢೀಕರಣ ಪತ್ರ
- ತಾಂತ್ರಿಕ ವಿದ್ಯಾರ್ಹತೆಯ ಧೃಢೀಕರಣ ಪತ್ರ
- ಜಾತಿ ಧೃಢೀಕರಣ ಪತ್ರ(ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿ)
- ಉಧ್ಯಮ ಅಭಿವೃದ್ಧಿ ಕಾರ್ಯಕ್ರಮ( ಇ.ಡಿ.ಪಿ.) ತರಬೇತಿ ಧೃಢೀಕರಣ ಪತ್ರ(ಈಗಾಗಲೇ ತರಬೇತಿ ಪಡೆದ ಅಭ್ಯರ್ಥಿಗಳಿಂದ)

**ಫಲಾನುಭವಿಗಳ ಆಯ್ಕೆ:**

ಜಿಲ್ಲಾ ಮಟ್ಟದ ಜಾಗೃತ ದಳ( ಡಿಸ್ಟ್ರಿಕ್ಟ್ ಲೇವಲ್ ಟಾಸ್ಕ್ ಫೋರ್ಸ್) ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಈ ಸಮಿತಿಗೆ ಜಿಲ್ಲಾಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ.

**ಯೋಜನಾ ಮಂಜೂರಾತಿ:**

ಬ್ಯಾಂಕುಗಳು, ಯೋಜನೆಯ ತಾಂತ್ರಿಕ– ಆರ್ಥಿಕ ಯಶಸ್ವೀ ಸಾಧ್ಯತೆಯ ಬಗ್ಗೆ ಕೂಲಂಕುಶ ಅಧ್ಯಯನ ಮಾಡಿ ಮಂಜೂರಾತಿ ನೀಡುತ್ತದೆ.

**ಬ್ಯಾಂಕು ಸಾಲದ ಮೊತ್ತ:**

ಮಂಜೂರಾದ ಯೋಜನಾ ಮೊತ್ತದ 90–95% ಹಣವನ್ನು ಬ್ಯಾಂಕುಗಳು ಬಿಡುಗಡೆ ಮಾಡುತ್ತವೆ.

**ಯೋಜನೆಗೆ ಫಲಾನುಭವಿಗಳ ಕೊಡುಗೆ:**

ಯೋಜನಾ ಮೊತ್ತದ 10% ನ್ನು ಸಾಮಾನ್ಯ ವರ್ಗದವರು ಮತ್ತು ಇತರೇ ಹಿಂದುಳಿದವರು 5% ನ್ನು ಭರಿಸತಕ್ಕದ್ದು.

| ಸರಕಾರದ ಸಹಾಯಧನ<br>ವಿವಿಧ ಪಂಗಡಗಳ ಫಲಾನುಭವಿಗಳು ವ್ಯಾಪ್ತಿ ಪ್ರದೇಶ | ಮಾಲೀಕರ ಕೊಡುಗೆ | ಸಹಾಯಧನ ಪ್ರಮಾಣ | |
|---|---|---|---|
| | ಯೋಜನಾ ವೆಚ್ಚ | | |
| ಸಾಮಾನ್ಯ ವರ್ಗ | ಮಾಲೀಕರ ಕೊಡುಗೆ 10% | ನಗರ ಸಹಾಯಧನ 15% | ಗ್ರಾಮೀಣ ಸಹಾಯಧನ 25% |
| ವಿಶೇಷ(ಪ.ಜಾ/ಪ.ವ/ಒಬಿಸಿ/ ಅಲ್ಪಸಂಖ್ಯಾತರು/ಮಹಿಳೆಯರು /ಮಾಜಿ ಸೈನಿಕರು/ವಿಕಲಾಂಗ | 05% | 25% | 35% |
| ಚೇತನರು/ಎನ್.ಇ.ಆರ್/ಗುಡ್ಡಗಾಡು ಮತ್ತು ಗಡಿ ಭಾಗದಲ್ಲಿ ವಾಸಿಸುವವರು<br><br>ಉದಾ: ಒಟ್ಟು ವೆಚ್ಚ ರೂ. 25/ ಲಕ್ಷವಾದರೆ ಅದರ 35% ಸಹಾಯಧನ ಎಂದರೆ ರೂ. 8.75 ಲಕ್ಷ | | | |

**ಮಾರುಕಟ್ಟೆ ಬೆಂಬಲ:**

ಈ ಯೋಜನೆಯಡಿಯಲ್ಲಿ ಉತ್ಪಾದಿಸಿದ ವಸ್ತುಗಳ ಮಾರುಕಟ್ಟೆಗೆ, ಮೇಳ/ಪ್ರದರ್ಶನ, ಕೊಳ್ಳುವವರ ಮತ್ತು ಮಾರಾಟಗಾರರ ಮೇಳ ಇತ್ಯಾದಿಗಳನ್ನು ಏರ್ಪಡಿಸಲಾಗುವುದು.

**ಭೌತಿಕ ಪರಿಶೀಲನೆ:**

ಯೋಜನೆಯ ಅನುಷ್ಠಾನ ಪರಿಣಾಮ, 100% ಸರಕಾರದ ಸಹಾಯಧನದ ಸದುಪಯೋಗದ ಬಗ್ಗೆ ಖಾತರಿಪಡಿಸಲು ಹೊರಗಿನ ವ್ಯಕ್ತಿ/ಸಂಸ್ಥೆಗಳ ಮೂಲಕ ಭೌತಿಕ ತಪಾಸಣೆ ಮಾಡಿಸಲಾಗುವುದು. ಇದು ನಿಗಾವಹಿಸುವಿಕೆ ಪ್ರಕ್ರಿಯೆಯ ಭಾಗವಾಗಿರುತ್ತದೆ.

**ನಿಗಾವಹಿಸುವಿಕೆ:**

ನಿಗಾವಹಿಸುವಿಕೆ ಪ್ರಕ್ರಿಯೆಯು ರಾಜ್ಯ/ವಲಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಯುತ್ತದೆ.

**ಯೋಜನೆಯಡಿಯಲ್ಲಿ ಬರುವ ಉದ್ದಿಮೆಗಳು:**

ಕೃಷಿ ಮತ್ತು ಆಹಾರ ತಯಾರಿಕೆ, ಅರಣ್ಯ ಆಧಾರಿತ ಉದ್ದಿಮೆ, ಕೈಯಿಂದ ಹಾಳೆ ತಯಾರಿಕೆ/ಪೈಬರ್,ಮಿನರಲ್ ಆಧಾರಿತ ಉದ್ದಿಮೆ, ಪೊಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆ,ಗ್ರಾಮೀಣ ತಾಂತ್ರಿಕತೆ ಮತ್ತು ಜೈವ ನೈಪುಣ್ಯತೆ, ಸೇವಾ ವಲಯ ಟೆಕ್ಸ್ ಟೈಲ್ಸ್ ಒಳಗೊಂಡಿದ್ದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಕೆ.ವಿ.ಐ.ಸಿ)/ (ಕೆ.ವಿ.ಐ.ಬಿ) /(ಡಿ.ಐ. ಸಿ.)/ಬ್ಯಾಂಕುಗಳು

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

**KHADI AND VILLAGE INDUSTRIES COMMISSION**
MINISTRYOF MICRO & MEDIUM ENTERPRISES,

GOVT.OF INDIA
State Office:Vijnapura,Doorvaninagarpost,
Bangalore 560016
Off:080-2566884 email:director_so_kvic_blr@yahoo.com

ನನ್ನ ಸಂದೇಶ ಅಂತ ಏನೂ ಇಲ್ಲ.
ನನ್ನ ಬದುಕೇ ಒಂದು ಸಂದೇಶ.
ನನ್ನ ಎಲ್ಲಾ ನಡೆ ಮತ್ತು ತೀರ್ಮಾನಗಳ ಹಿಂದೆ
ನೈತಿಕ ಶಕ್ತಿ ಇದ್ದೇ ಇದೆ. . .
ಮಹಾತ್ಮ ಗಾಂಧೀಜಿ

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ

## ಸ್ಟೆಪ್ ಯೋಜನೆ

ಶ್ರೀಮತಿ ಜೋಯ್ಸ್ ಪಿರೇರ
ಕ್ರಾಸ್ ಸಂಸ್ಥೆ

ಕ್ರಾಸ್ ಸಂಸ್ಥೆ, ಬೆಂಗಳೂರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನವದೆಹಲಿ ಇವರ ಸಹಯೋಗದೊಂದಿಗೆ ಸಪೋರ್ಟ್ ಫಾರ್ ಟ್ರೈನಿಂಗ್ ಅಂಡ್ ಎಂಪ್ಲಾಯ್‌ಮೆಂಟ್ ಫಾರ್ ವುಮೆನ್ (ಸ್ಟೆಪ್) ಮಹಿಳೆಯರ ಜೀವನೋಪಾಯ ಮತ್ತು ತರಭೇತಿ (ಸ್ಟೆಪ್) ಯೋಜನೆಯನ್ನು ಕೋಲಾರ, ಮೈಸೂರು, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ಅನುಷ್ಟಾನ ಮಾಡಲಾಗುತ್ತಿದೆ. 1400 ಮಹಿಳಾ ಫಲಾನುಭವಿಗಳಿಗೆ ತರಭೇತಿಗಳ ಮುಖಾಂತರ ನಿರಂತರ ಉದ್ಯೋಗ ಮತ್ತು ಸರ್ವತೋನ್ಮುಖ ಅಭಿವೃದ್ದಿಯೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯಡಿಯಲ್ಲಿ ಮಹಿಳಾ ಸಂಘಟನೆಗಳನ್ನು ಪ್ರಾರಂಭಿಸಲು ಉತ್ತೇಜನ ನೀಡುವ ಸಲುವಾಗಿ ಸಹಕಾರ ಸಂಘಗಳನ್ನು ರಚಿಸಿ ಮಹಿಳೆಯರನ್ನು ಸಶಕ್ತಗೊಳಿಸಿ ತರಕಾರಿ ಬೆಳೆಯುವ ಮುಖಾಂತರ ಸ್ವಾವಲಂಬನೆ ತರುವ ನಿಟ್ಟಿನಲ್ಲಿ ಮಹಿಳಾ ಫಲಾನುಭವಿಗಳನ್ನು ಸಂಘಟಿಸುವುದು ಮಹತ್ತರ ಕಾರ್ಯವಾಗಿದೆ. ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ ಯೋಜನೆಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಎರಡು ತರಕಾರಿ ಬೆಳೆಗಳನ್ನು ಬೆಳೆಯಲು ಪೂರ್ವಭಾವಿ ಸಿದ್ಧತೆಗಳು ನಡೆದಿವೆ.

ಈಗಾಗಲೇ ಭಾರತೀಯ ತೋಟಗಾರಿಕ ಸಂಶೋಧನಾ ಸಂಸ್ಥೆಯ ಸಹಭಾಗಿತ್ವದಲ್ಲಿ ಸುಧಾರಿತ ತರಕಾರಿ ಬೆಳೆಯುವ ಕುರಿತು ತರಭೇತಿಗಳನ್ನು ನೀಡಲಾಗಿದೆ. ಈ ತರಭೇತಿಗಳು ಸಾವಯವ ಕೃಷಿಯಲ್ಲಿ ಸರಳ ಆಧುನಿಕ ತಂತ್ರಜ್ಞಾನ ಬಳಸಿ ಹೆಚ್ಚಿನ ಇಳುವರಿ ಮತ್ತು ಆದಾಯ ಪಡೆಯುವ ಕುರಿತು, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸಾವಯವ ಗೊಬ್ಬರಗಳ ತಯಾರಿ ಮತ್ತು ಬಳಕೆ, ಪ್ಯಾಕಿಂಗ್ ಮತ್ತು ಮಾರ್ಕೆಟಿಂಗ್ ತಂತ್ರಜ್ಞಾನಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿ ಫಲಾನುಭವಿಗಳನ್ನು ಸಾವಯವ ಕೃಷಿ ಪ್ರಾರಂಭಿಸಲು ತಯಾರು ಮಾಡುತ್ತವೆ.

ಇದರೊಂದಿಗೆ ಸಹಾಯಕ ಸೇವೆಗಳಲ್ಲಿ ಆರೋಗ್ಯ ಸೇವೆಗಳು, ವಯಸ್ಕರ ಶಿಕ್ಷಣ, ಮಹಿಳಾ ಸಬಲೀಕರಣ ಮತ್ತು ಕಾನೂನಿನ ನೆರವು ಒಳಗೊಂಡಿದ್ದು ಮಹಿಳೆಯರ ಸರ್ವತೋಮುಖ ಅಭಿವೃದ್ದಿಗೆ ಪೂರಕವಾಗಿದೆ. ಯೋಜನೆಯಲ್ಲಿ ತರಕಾರಿ ಬೆಳೆಯಲು ಬೇಕಾಗುವ ಬೀಜ, ಗೊಬ್ಬರಗಳು ಮತ್ತು ತಾಂತ್ರಿಕ ತರಭೇತಿ, ಮಾರುಕಟ್ಟೆ ವ್ಯವಸ್ಥೆ ಇತ್ಯಾದಿಗಳನ್ನು ಪೂರೈಸುವ ಉದ್ದೇಶವಿದೆ.

**ಹೇಗೆ?**

- ಮಹಿಳೆಯಲ್ಲಿರುವ ಕೌಶಲ್ಯಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸುವುದು
- ಉತ್ತಮ ಮತ್ತು ನಿರಂತರ ಉದ್ಯೋಗ ವ್ಯವಸ್ಥೆ ಕಲ್ಪಿಸುವುದು
- ಮಹಿಳಾ ಸಂಸ್ಥೆಗಳನ್ನು ಪ್ರಾರಂಭಿಸಲು ಉತ್ತೇಜನ
- ಇನ್ನಿತರ ಸೇವೆಗಳು
- ಶಿಫಾರಸು ಸೇವೆಗಳು (ಪಿ.ಹೆಚ್.ಸಿ, ಸರ್ಕಾರಿ ಆಸ್ಪತ್ರೆಗಳು ಇತ್ಯಾದಿ)

**ಎಲ್ಲಿ**

- ಮೈಸೂರು, ಹಾಸನ, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಯ ಆಯ್ದ ಗ್ರಾಮಗಳಲ್ಲಿ.

**ಏನು?**

- ಸಿ.ಎಮ್.ಎಸ್.ಎಸ್.ಎಸ್., ಒ.ಡಿಎಸ್., ಬಿ.ಎಮ್.ಎಸ್.ಎಸ್.ಎಸ್. ಮತ್ತು ನಿಸರ್ಗ ಸಂಘಗಳ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 28 ಸಹಕಾರಿ ಸಂಘಗಳ ರಚನೆ
- ಪ್ರತೀ ಸಂಘದಲ್ಲಿ 50 ಮಹಿಳಾ ಸದಸ್ಯರಿರಬೇಕು
- ಕ್ಯಾಪ್‌ಸಿಕಂ, ಬೆಂಡೆಕಾಯಿ, ಮೆಣಸಿನಕಾಯಿ ಮತ್ತು ಟೊಮಾಟೋಗಳನ್ನು ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಯುವುದು
- ಬೆಳೆದ ತರಕಾರಿಗಳನ್ನು ಸಹಕಾರ ಸಂಘಗಳ ಮುಖಾಂತರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಮ್.ಸಿ.) ಗಳು ಮತ್ತು ವಾರದ ಸಂತೆಯಲ್ಲಿ ಮಾರಾಟ ಮಾಡುವುದು.
- ಇದರೊಂದಿಗೆ ಸಹಕಾರಿ ಸಂಘಗಳ ನೋಂದಣಿ ಮಾಡುವುದು.

**ಯಾವಾಗ?**

- ಸಮಯ ವ್ಯಾಪ್ತಿ: ಅಕ್ಟೋಬರ್ 2013 ರಿಂದ ಸೆಪ್ಟೆಂಬರ್ 2015 ರವರೆಗೆ
- ಹವಾಮಾನಕ್ಕನುಗುಣವಾಗಿ ವರ್ಷಕ್ಕೆ ಎರಡು ಬೆಳೆಗಳಂತೆ ನಾಲ್ಕು ಬೆಳೆಗಳನ್ನು ಎರಡು ವರ್ಷಗಳ ಅವಧಿಯಲ್ಲಿ ಬೆಳೆಯುವುದು.

**ಸೌಲಭ್ಯಗಳು**

- ಪ್ರತೀ ತರಕಾರಿ ಬೆಳೆಯಲು ತಾಂತ್ರಿಕ ಮಾಹಿತಿ :– ಬಿತ್ತನೆ, ನೀರಿನ ಅವಶ್ಯಕತೆ, ಬೆಳೆಯಲು ಸೂಕ್ತ ಹವಾಮಾನ ಮತ್ತು ಸೂಕ್ತ ಸಮಯ, ಗೊಬ್ಬರ ನೀಡುವುದು ಇತ್ಯಾದಿ.
- ಪ್ರತೀ ಫಲಾನುಭವಿಗೆ ತರಕಾರಿ ಬೀಜ ವಿತರಣೆ
- ಗೊಬ್ಬರ ಮತ್ತು ಫರ್ಟಿಲೈಜರ್ ಬೂಸ್ಟರ್ ವಿತರಣೆ
- ತರಕಾರಿಗಳನ್ನು ಮಾರುಕಟ್ಟೆಗೆ ಕೊಂಡೊಯ್ಯಲು ಕ್ರೇಟ್ಸ್ ಮತ್ತು ಇನ್ನಿತರ ಸೌಲಭ್ಯಗಳು

**ಪೂರಕ ಸೇವೆಗಳು**

- ಆರೋಗ್ಯ ಸೇವೆಗಳು
- ಕಾನೂನು ನೆರವು
- ಲಿಂಗ ಸಮಾನತೆ ಕುರಿತು ಅರಿವು
- ಶಿಕ್ಷಣ ಸೇವೆಗಳು

# ಪ್ರಸ್ತುತಿ

## ವರ್ತಮಾನಕ್ಕೆ – ಒಂದು ಚಿಂತನ

ಜಿ. ಯಂ. ವರ್ಗೀಸ್
ಕ್ರಾಸ್ ಸಂಸ್ಥೆ

### ಮಹಾಲೋಕಸಭಾ ಸಂಗ್ರಾಮ 2014 – ಮತ ಮಾರಾಟಕ್ಕಲ್ಲ, ದೇಶದ ಹಿತ ಕಾಯಲಿಕ್ಕೆ

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವದ ಮಹಾಯುದ್ಧಕ್ಕೆ ಕಣ ಸಜ್ಜಾಗಿದೆ.ಈಗಾಗಲೇ ಚುನಾವಣಾ ಆಯೋಗ ರಣಕಹಳೆಯನ್ನು ಮೊಳಗಿಸಿಬಿಟ್ಟಿದೆ. 16 ನೇ ಸಂಸತ್ತಿಗೆ ವೇದಿಕೆ ಸಜ್ಜಾಗುತ್ತಿದ್ದು ಇದೇ ಮೊದಲ ಬಾರಿಗೆ 9 ಹಂತಗಳಲ್ಲಿ ಮತದಾನ ನಡೆಯಲಿವೆ. ಏಪ್ರಿಲ್ 7 ರಿಂದ ಪ್ರಾರಂಭವಾಗಿ ಮೇ ತಿಂಗಳ 12ಕ್ಕೆ ಮುಗಿಯಲಿವೆ. ಮೇ 16 ಕ್ಕೆ ಮತಗಳ ಎಣಿಕೆ ನಡೆಯಲಿದ್ದು ಈ ಲೋಕ ಸಭಾ ಸಾರ್ವತ್ರಿಕ ಚುನಾವಣೆ ಮೂಲಕ ಮತದಾರರು ಹೊಸ ಭಾರತವನ್ನು ಕಾಣಲು ಸಜ್ಜಾಗುತ್ತಿದ್ದಾರೆ. 1952ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ 17.6 ಕೋಟಿ ಮತದಾರರಿದ್ದರೆ ಈ ಸಾರಿಯ ಚುನಾವಣೆಗೆ 81.4 ಕೋಟಿ ಮತದಾರರು ಮತದಾನ ಮಾಡಲಿದ್ದಾರೆ. ಒಟ್ಟು 543 ಲೋಕಸಭಾ ಕ್ಷೇತ್ರಗಳಿದ್ದು 1.1 ಕೋಟಿ ಸಿಬ್ಬಂಧಿಗಳನ್ನು ಚುನಾವಣೆಗೆ ಬಳಕೆ ಮಾಡಲಿದ್ದು, 17 ಲಕ್ಷ ವಿಧ್ಯುನ್ಮಾನ ಮತ ಯಂತ್ರಗಳನ್ನು ಬಳಸಲಾಗುತ್ತಿದೆ. ಈ ಚುನಾವಣೆಯಲ್ಲಿ 2.3 ಕೋಟಿ ಹೊಸ ಯುವ ಮತದಾರರಿದ್ದು ಬದಲಾವಣೆಯನ್ನು ನಿರೀಕ್ಷಿಸಲಾಗುತ್ತಿದೆ.

ಈಗಿನ ಚುನಾವಣೆಗಳು ತತ್ವಾದರ್ಶಗಳನ್ನು ಮೀರಿ ಮುನ್ನುಗ್ಗುತ್ತಿವೆ. "Politics without principles is a sin" "ತತ್ವರಹಿತ ರಾಜಕೀಯ ಒಂದು ಪಾಪ" ಎಂದು **ಮಹಾತ್ಮ ಗಾಂಧೀಜಿಯ**ವರು ಹೇಳುತ್ತಿದ್ದರು. ಅಮೇರಿಕಾದ ಹಿಂದಿನ ಅಧ್ಯಕ್ಷರಾದ **ಅಬ್ರಹಾಂ ಲಿಂಕನ್** ಹೇಳಿದ, ಪ್ರಜಾಪ್ರಭುತ್ವ ಎಂದರೆ – ಜನರ, ಜನರಿಂದ ಜನರಿಗಾಗಿ ರೂಪಿತ ಸರಕಾರ ಎಂಬ ಮಾತು ಭಾರತಕ್ಕೆ ಅನ್ವಯಿಸಲು ಇನ್ನೆಷ್ಟು ವರ್ಷ ಕಾಯಬೇಕೋ? ನಮ್ಮಲ್ಲಿ ಇದು ವಾಸ್ತವತೆ, ಜಾತಿ– ಧರ್ಮದ ಹೆಸರಿನಲ್ಲಿ ಮತವನ್ನು ರಾಜಕಾರಣಿಗಳು ಖರೀದಿಸುವ, ಮತದಾರರು ಮತವನ್ನು ಮಾರಾಟಮಾಡುವ ಕಾನೂನುಬಾಹಿರ ನಡವಳಿಕೆ ನಾವು ಕಾಣುತ್ತಿದ್ದೇವೆ. ಇದು ಶೋಚನೀಯ ಮತ್ತು ನೈತಿಕತೆಯ ಅಧಃಪತನ

ಅಭ್ಯರ್ಥಿಗಳು ಕೊಡುವ ಒಪ್ಪೊತ್ತಿನ ಊಟಕ್ಕೆ, ಹಣ, ಹೆಂಡಕ್ಕೆ, ಸೀರೆ ಪಂಚೆಗಳಿಗೆ ತಮ್ಮ ಮತವನ್ನೇ ಮಾರಿಕೊಳ್ಳುವ ಜನರು ಅರ್ಥ ಮಾಡಿಕೊಳ್ಳುವ ವಿಷಯವೊಂದಿದೆ.ಇವೆಲ್ಲ ಆಮಿಷಗಳನ್ನು ಒಡ್ಡುವವರು ತುಂಬಾ ಜಾಣರು,ಗಾಳದ ತುದಿಯ ಕೊಕ್ಕೆಗೆ ಎರೆ ಹುಳು ಸಿಕ್ಕಿಸಿ ಮೀನು ಹಿಡಿಯುವ ಜಾಣತನ ಅವರದು. ಎರೆಹುಳವನ್ನು ತಿನ್ನಲು ಹಾತೊರೆದ ಮೀನು ಗಾಳಕ್ಕೆ ಸಿಕ್ಕಿ ಸಾಯುವಾಗ ಅತ್ತರೇನು ಪ್ರಯೋಜನ! ಆಮಿಷಗಳಿಗೆ ಒಳಗಾಗುವ ಮತದಾರರ ಗತಿಯೂ ಇದೆ. ಕೇವಲ ರೂ. 500 ರಿಂದ 1000ಕ್ಕೆ ಮತ ಮಾರಿ ತಮಗೆ ಸಿಗಬೇಕಾದ ಲಕ್ಷಾಂತರ ರೂಪಾಯಿ ಮೌಲ್ಯದ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳುವ ರಹದಾರಿಯಲ್ಲವೇ? ಆ ಮೂಲಕ ತಮ್ಮ ಹಕ್ಕನ್ನು ಕೇಳುವ ನೈತಿಕತೆ ಕಳೆದುಕೊಳ್ಳುವುದಿಲ್ಲವೇ?

**ಶಾಸನ ಸಭೆಗಳಲ್ಲಿ ಮಹಿಳಾ ಮೀಸಲು ಅತಂತ್ರ ಸ್ಥಿತಿ:**

ಅತಿ ಶೋಚನೀಯ ವಿಷಯವೆಂದರೆ ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲು ಕಲ್ಪಿಸುವ ಮಸೂದೆ ಸಿದ್ಧವಾಗಿ 17 ವರ್ಷ ಕಳೆದರೂ ಅದಕ್ಕೆ ಸಂಸತ್ತಿನಲ್ಲಿ ಅನುಮೋದನೆ ದೊರಕದಿರುವುದು ನಿಜಕ್ಕೂ ಖೇದ ಮತ್ತು ನಾಚಿಕೆಗೇಡಿನ ಸಂಗತಿ. 1997 ರಿಂದಲೂ ಮಹಿಳಾ ಮೀಸಲು ಮಸೂದೆ ಕೊಳೆಯುತ್ತಿದೆ. ಎಲ್ಲ ರಾಜಕೀಯ ಪಕ್ಷಗಳು ಆರಂಭದಲ್ಲಿ ಮಸೂದೆಗೆ ಸಮ್ಮತಿ ಸೂಚಿಸಿದರೂ ನಂತರ ಅದರ ಅನುಮೋದನೆಗೆ ಇಚ್ಛಾ ಶಕ್ತಿ ತೋರದಿರುವುದು ಅವುಗಳ ಕುಟಿಲ, ಕುತಂತ್ರ ಮತ್ತು ಕುಹುಕ ಬುದ್ಧಿಗೆ ಹಿಡಿದ ಕನ್ನಡಿಯಾಗಿದೆ. ಒಟ್ಟು ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರಿಗೆ ಶಾಸನ ರೂಪಿಸುವಲ್ಲಿ ಭಾಗವಹಿಸಲು ಅಧಿಕಾರ ಕಲ್ಪಿಸದಿದ್ದರೆ ಅಭಿವೃದ್ಧಿಯಾದರೂ ಹೇಗೆ ಸಾಧ್ಯ? ರಾಜಕೀಯ ಪಕ್ಷಗಳು ಕರಟಕ ದಮನಕ ನೀತಿಯನ್ನು ಬಿಟ್ಟು ಮಹಿಳೆಯರಿಗೆ ಮುಖ್ಯವಾಹಿನಿಯಲ್ಲಿದ್ದು ನೀತಿ ನಿರೂಪಣೆಗೆ ಅವಕಾಶ ಒದಗಿಸುವ ಅನಿವಾರ್ಯತೆ ಇದೆ. ಮಹಿಳೆಯರು ಮಹಿಳಾ ಮೀಸಲಾತಿಗೆ ಮತಹಾಕಬೇಕಿದೆ.

**ಈ ಸಲ ನೋಟಾ ವು ಲಭ್ಯ:**

ಏನಿದು ನೋಟಾ? ಮತದಾನದ ವೇಳೆ ಮತದಾರರಿಗೆ ನೋಟಾ (ನನ್ನ ಮತ ಯಾರಿಗೂ ಇಲ್ಲ) ಎಂಬ ಆಯ್ಕೆಯು ಈ ಚುನಾವಣೆಯಲ್ಲಿ ಲಭ್ಯ. ಹೀಗಾಗಿ ಒಬ್ಬರೂ ಯೋಗ್ಯರಿಲ್ಲ ಹೀಗಾಗಿ ಮತ ಚಲಾಯಿಸಿಲ್ಲ ಎಂದು ಸಬೂಬು ಹೇಳುವಂತಿಲ್ಲ. ಮತದಾರನಿಗೆ ಯೋಗ್ಯ ಅಭ್ಯರ್ಥಿಗಳಿಲ್ಲ ಎಂದು ಅನಿಸಿದರೆ ತನಗೆ ನೀಡಿರುವ ವಿದ್ಯುನ್ಮಾನ ಮತ ಪಟ್ಟಿಯಲ್ಲಿ "ನೋಟಾ" ಮತ ನೀಡಬಹುದು. ಇದು ಸರ್ವೋನ್ನತ ನ್ಯಾಯಾಲಯ (ಸುಪ್ರೀಂ ಕೋರ್ಟ್) ನೂತನವಾಗಿ ಮತದಾರನಿಗೆ ನೀಡಿದ ಆಯ್ಕೆಯ ಹಕ್ಕು. ಈ ಅವಕಾಶವನ್ನು ಮತದಾರ ಬಳಸಿ ಭ್ರಷ್ಟ ರಾಜಕಾರಣಿಗಳನ್ನು ದೂರ ಇಡಬಹುದಾಗಿದೆ.

**ಏನಿದು ಚುನಾವಣಾ ನೀತಿ ಸಂಹಿತೆ?**

ಚುನಾವಣೆ ಘೋಷಣೆಯಾದ ಕ್ಷಣದಿಂದ ನೀತಿ ಸಂಹಿತೆ ಜಾರಿಗೆ ಬಂದು ಫಲಿತಾಂಶ ಪ್ರಕಟವಾಗುವ ತನಕ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಮತದಾರರಿಗೆ ಆಮಿಷವೊಡ್ಡುವಂಥ ಯೋಜನೆ, ಘೋಷಣೆ ಪ್ರಕಟಿಸುವಂತಿಲ್ಲ. ಕೇವಲ ಕೆಲವು ತುರ್ತು ಅಗತ್ಯಗಳಾದ ಬರ, ಕುಡಿಯುವ ನೀರು, ಬೆಂಕಿ ಅನಾಹುತ, ಪ್ರವಾಹ ಅಪಘಾತಗಳಂಥಹ ಪ್ರಕರಣಗಳಲ್ಲಿ ಮಾತ್ರ ಸರಕಾರ ನಿರ್ಧಾರ ಕೈಗೊಳ್ಳಬಹುದು.ಇಲ್ಲಿಯೂ ಮತದಾರರನ್ನು ಸೆಳೆಯುವ ಪ್ರಯತ್ನಕ್ಕೆ ನಿರ್ಬಂಧವಿದೆ. ನೀತಿ ಸಂಹಿತೆ ಜಾರಿಗೆ ಬಂದಮೇಲೆ ಯಾವುದೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ. ಒಂದುವೇಳೆ ಮಾಡಲೇ ಬೇಕಾದಲ್ಲಿ ಚುನಾವಣೆ ಆಯೋಗದ ಪೂರ್ವಾನುಮತಿ ಪಡೆಯಬೇಕು. ಕೋಮು, ಜಾತಿ, ಧರ್ಮದ ಹೆಸರಿನಲ್ಲಿ ಜನರನ್ನು ಪ್ರಚೋದಿಸುವ, ಮತದಾರರನ್ನು ಸೆಳೆಯುವ ಕೆಲಸ ಮಾಡುವಂತಿಲ್ಲ.

**ನಾವೇನು ಮಾಡೋಣ ?**

1. ನಮ್ಮ ದೇಶದ ಜಾತ್ಯಾತೀತತೆಯ ಲಕ್ಷಣಗಳನ್ನು ಎತ್ತಿ ಹಿಡಿಯುವ ಹಾಗೂ ಕೋಮು ಸೌಹಾರ್ಧತೆಯನ್ನು ಬೆಳೆಸುವ ಮತ್ತು ಅಂತರ ಧರ್ಮೀಯ ಸಂವಾದದ ಹುರುಪು ಮತ್ತು ಅರ್ಥ ವಂತಿಕೆ ಉಳ್ಳವರನ್ನು ನಾವು ಮತ ನೀಡಿ ಆಯ್ಕೆ ಮಾಡೋಣ.
2. ಅಲ್ಪಸಂಖ್ಯಾತರು ಹಾಗೂ ಸಮಾಜದ ದುರ್ಬಲ ವರ್ಗಗಳ ಬಗ್ಗೆ ಕಾಳಜಿ ವಹಿಸುತ್ತಾ ಅವರ ಹಕ್ಕುಗಳನ್ನು ಸಂರಕ್ಷಿಸಿ, ಅವರ ಏಳಿಗೆಗಾಗಿ ದುಡಿಯುವಂತವರನ್ನು ಆಯ್ಕೆ ಮಾಡೋಣ.
3. ನೆಲ, ಜಲ ಮತ್ತು ಅರಣ್ಯಗಳ ಬಗ್ಗೆ ಕಾಳಜಿ ವಹಿಸುವ ಮತ್ತು ಗುಡ್ಡಗಾಡು ಜನರ ಹಾಗೂ ಎಲ್ಲ ಧರ್ಮಗಳ ದಲಿತರ ಹಕ್ಕುಗಳನ್ನು ಸಂರಕ್ಷಿಸುವ ನಾಯಕರಿಗೆ ಮತ ಹಾಕುವ.
4. ವಿಶೇಷವಾಗಿ ಬಡವರ ಮತ್ತು ಕಡಿಮೆ ಸೌಲಭ್ಯ ಹೊಂದಿರುವವರಿಗೆ ನೆರವಾಗಬಲ್ಲಂತಹ ಆರ್ಥಿಕ ನೀತಿ ರೂಪಿಸಿ, ಅವರ ಗೌರವವನ್ನು ರಕ್ಷಿಸುತ್ತ, ರಾಷ್ಟ್ರ ನಿರ್ಮಾಣದಲ್ಲಿ ಅವರಿಗೂ ಸೂಕ್ತ ಸ್ಥಾನ ಕಲ್ಪಿಸುವಂತವರು.

ಈ ಸಲದ ಮತ ಚುನಾವಣೆಯ ಮೂಲಕವಾದರೂ ಭ್ರಷ್ಟಚಾರ ಕಡಿಮೆ ಕಾಣಲು ಸಾಧ್ಯವಾದೀತೇ ಎಲ್ಲರೂ ಈ ನಿಟ್ಟಿನಲ್ಲಿ ಪ್ರಬುದ್ಧರಾಗಬೇಕಿದೆ.

# ಸುದ್ಧಿ ತಾಂಬೂಲ

ರಿಚರ್ಡ್ ಮಾರ್ಟಿಸ್, ಕ್ರಾಸ್ ಸಂಸ್ಥೆ

## ಮಹಿಳಾಭಿವೃದ್ಧಿಯ ಪ್ರಗತಿ ಪರಿಶೀಲನಾ ಕಾರ್ಯಕ್ರಮ

ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ಫೆಬ್ರವರಿ 17 ರಿಂದ 19 ರವರೆಗೆ ಪ್ರಾಂತೀಯ ಮಹಿಳಾಭಿವೃದ್ಧಿ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿತ್ತು. ಕ್ರಾಸ್ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ 13 ಸಹ ಸಂಸ್ಥೆಗಳ 36 ಮಂದಿ ಕಾರ್ಯಕ್ರಮ ಅನುಷ್ಠಾನ ಸಿಬ್ಬಂಧಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯವಾಗಿ ಮಹಾಸಂಘದ ಗುರಿ ಮತ್ತು ಉದ್ದೇಶ ಹಾಗೂ ಉಪನಿಭಂದನೆಯ ತಯಾರಿಕೆ ಮತ್ತು ಮಹಾಸಂಘವನ್ನು ಉತ್ಕೃಷ್ಠತೆಯತ್ತ ಒಯ್ಯುವ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು.





## ಕ್ರಾಸ್ ಕಿರೀಟಕ್ಕೆ ಮತ್ತೊಂದು ಮುತ್ತು

ಕ್ರಾಸ್ ಸಂಸ್ಥೆಯು ಪ್ರಸ್ತುತ ಐರೋಪ್ಯ ರಾಷ್ಟ್ರದ ಒಕ್ಕೂಟದೊಂದಿಗೆ ಅಭಿವೃದ್ಧಿ ಯೋಜನಾ ಕಾರ್ಯಕ್ರಮದ ಬಗ್ಗೆ ಕಾರ್ಯಪ್ರವೃತ್ತರಾಗುವ ಬಗ್ಗೆ ನೋಂದಾವಣೆ ಪಡೆದು ಅದರ ಸಹಕಾರದಲ್ಲಿ ಅಭಿವೃದ್ಧಿ ಯೋಜನಾ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅರ್ಹತೆ ಪಡೆದುಕೊಂಡಿದೆ.

## ಪಂಚಾಯತ್ ರಾಜ್ ಪರಿಷ್ಕೃತ ನೀತಿ ನಿರೂಪಣೆ– ರಾಜ್ಯ ಮಟ್ಟದ ಕಾರ್ಯಾಗಾರ

ಫೆಭ್ರವರಿ 27 ರಂದು ಉತ್ತಮ ಆಡಳಿತ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿತ್ತು. ಅಲ್ಲದೇ ಪೆಭ್ರವರಿ 28 ರಂದು ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಸಂಬಂಧಿತ ಮಾಹಿತಿ ಕಮ್ಮಟವನ್ನು ಆಯೋಜಿಸಲಾಗಿತ್ತು. ರಾಜ್ಯದ ವಿವಿಧ ಸರ್ಕಾರೇತರ ಸಂಸ್ಥೆಗಳ ಮುಖ್ಯಸ್ಥರು, ಜನಪ್ರತಿನಿಧಿಗಳು, ತಜ್ಞರು ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸುಮಾರು 165 ಮಂದಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯವಾಗಿ ಪಂಚಾಯತ್ ಸಬಲೀಕರಣದತ್ತ ತಜ್ಞರು ಹಾಗೂ ಶಿಬಿರಾರ್ಥಿಗಳು ನೀತಿ ನಿರೂಪಣೆಯಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಿದರು.





## ಉದ್ಧಿಮೆದಾರರಾಗಿ, ಕೆಲಸ ಕೊಡಿ–ಕೆಲಸ ಹುಡುಕುವವರಲ್ಲ !!!

ಮಾರ್ಚ್ 10 ರಿಂದ 13 ರವರೆಗೆ ಸಮೃದ್ಧಿ ಹಾಗೂ ಐ ಕ್ರಿಯೆಟ್ ಸಹಯೋಗದಲ್ಲಿ ಮಹಿಳೆಯರು ಸಣ್ಣ ಉದ್ಧಿಮೆದಾರರಾಗಿ ಉದ್ಯೋಗ ಸೃಷ್ಟಿಸುವ ಯೋಜನೆಯ ಬಗ್ಗೆ ತರಬೇತಿಯನ್ನು ನೀಡಲಾಯಿತು. ಸಣ್ಣ ಉದ್ಧಿಮೆಯ ಪ್ರಾರಂಭದ ಒಳಾರ್ಥ ಮತ್ತು ಅದನ್ನು ನಿಭಾಯಿಸುವ ಪರಿಯನ್ನು ಸೂಕ್ತ ರೀತಿಯಲ್ಲಿ ತಿಳಿಸಲಾಯಿತು. 35 ಮಂದಿಯ ರಾಜ್ಯಮಟ್ಟದ ತರಬೇತುದಾರರ ತಂಡವನ್ನು ರೂಪಿಸಲಾಯಿತು.





## ಕಾರಿಥಾಸ್ ಅಂತರಾಷ್ಟ್ರೀಯ ಕಾರ್ಯಾಗಾರ

ಜನವರಿ 6 ರಿಂದ 31 ರವರೆಗೆ ಕಾರಿಥಾಸ್ ಸಂಸ್ಥೆಯ ವತಿಯಿಂದ ರಾಷ್ಟ್ರಮಟ್ಟದ 'ಕ್ರಿಯಾಸಂಪನ್ನ ಅಭಿವೃದ್ಧಿ ಮಾರ್ಗ' (Development Dynamic Course DDC) ದ ಶಿಭಿರವನ್ನು ಏರ್ಪಡಿಸಲಾಗಿತ್ತು. 36, ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಶಿಬಿರಾರ್ಥಿಗಳು ಅಭಿವೃದ್ಧಿಶೀಲ ಯೋಜನೆಗಳ ರಚನೆ, ಕ್ರಿಯಾ ಕೌಶಲ್ಯದ ಬಗ್ಗೆ 26 ದಿನದ ತರಬೇತಿ ಪಡೆದರು.

## ಕ್ರಾಸ್ ನಿಂದ ನಿಮ್ಮ ಕೈಗೆ ಮತ್ತೊಂದು ಹೊತ್ತಗೆ

ಕ್ರಾಸ್ ಸಂಸ್ಥೆಯು ಪಂಚಾಯತ್ ರಾಜ್ ಬೆಳೆದುಬಂದ ಹಿನ್ನೆಲೆ, ಪಂಚಾಯತ್ ರಾಜ್ ನ ಕಾರ್ಯಕಲಾಪಗಳು, ಅಧಿಕಾರ, ಕಾರ್ಯ ವ್ಯಾಪ್ತಿ ಇತ್ಯಾದಿ ವಿಷಯಗಳನ್ನೊಳಗೊಂಡ **'ಪಂಚಾಯಿತಿ ರಾಜ್ಯ'** ಎಂಬ ಹೊತ್ತಗೆಯನ್ನು ಪ್ರಕಟಿಸಿತು. ಶ್ರೀಮಾನ್ ಅಲೆಕ್ಸಾಂಡರ್, ಮಾಜಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಾಜಿ ಮಂತ್ರಿಗಳು ಹೊತ್ತಿಗೆಯನ್ನು ಇತರ ಗಣ್ಯರ ಸಮ್ಮುಖದಲ್ಲಿ ಬಿಡುಗಡೆಯನ್ನು ಮಾಡಿದರು.



# ಏನಿದು ಪಶ್ಚಿಮ ಘಟ್ಟದ ಕುರಿತು ಕಸ್ತೂರಿ ರಂಗನ್ ವರದಿ?

ಜೀವ ವೈವಿಧ್ಯತೆ ಮತ್ತು ಪರಿಸರ ಸಮತೋಲನ ಕಾಪಾಡಲು ಕೇಂದ್ರ ಸರ್ಕಾರ ಆಗಸ್ಟ್ 17, 2012 ರಂದು ಬಾಹ್ಯಾಕಾಶ ವಿಜ್ಞಾನಿ ಡಾ. ಕಸ್ತೂರಿ ರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯ ತಂಡವನ್ನು ರಚಿಸಿತು.



**ಈ ಸಮಿತಿಯ ಶಿಫಾರಸ್ಸಿನಂತೆ ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲಾದ ರಾಜ್ಯಗಳು:**

ಪಶ್ಚಿಮ ಘಟ್ಟದ ಭೂ ಭಾಗವನ್ನು ಹೊಂದಿರುವ 6 ರಾಜ್ಯಗಳಾದ ಗೋವಾ, ಗುಜರಾತ್, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳ್ನಾಡುಗಳಾಗಿವೆ. ಒಟ್ಟು 4,156 ಗ್ರಾಮಗಳನ್ನು ಆವರಿಸಿದ್ದು, ಗೋವಾ–99, ಗುಜರಾತ್–64, **ಕರ್ನಾಟಕ – 1576,** ಕೇರಳ –123, ಮಹಾರಾಷ್ಟ್ರ– 2153 ಮತ್ತು ತಮಿಳ್ನಾಡು –135 ಗ್ರಾಮಗಳ ಜನರು ಇದರಿಂದ ಆತಂಕಕ್ಕೆ ಒಳಪಟ್ಟಿದ್ದಾರೆ.

**ಈ ಸಮಿತಿಯ ಶಿಫಾರಸ್ಸುಗಳೇನು?**

- ಈ ಸೂಕ್ಷ್ಮ ಪ್ರದೇಶಗಳಲ್ಲಿ ಕಲ್ಲುಗಣಿಗಾರಿಕೆ, ಮರಳುಗಣಿಗಾರಿಕೆ, ಸಂಪೂರ್ಣ ನಿಷೇಧ. ಈಗ ನಡೆಸಲಾಗುತ್ತಿರುವ ಗಣಿಗಾರಿಕೆಗಳನ್ನು 5 ವರ್ಷದೊಳಗಾಗಿ ಸಂಪೂರ್ಣ ನಿಲ್ಲಿಸುವುದು.
- ಯಾವುದೇ ಶಾಖೋತ್ಪನ್ನ ವಿದ್ಯುದಾಗಾರಗಳಿಗೆ ಈ ಪ್ರದೇಶದಲ್ಲಿ ಅವಕಾಶವಿಲ್ಲ.
- ಕೆಲವು ಷರತ್ತುಗಳಿಗನುಗುಣವಾಗಿ ಈ ಪ್ರದೇಶದಲ್ಲಿ ಜಲ ವಿಧ್ಯುತ್ ಯೋಜನೆಗಳಿಗೆ ಅವಕಾಶ ನೀಡಬಹುದಾಗಿದೆ.
- ಈ ಪ್ರದೇಶದಲ್ಲಿ ಸ್ಥಾಪನೆಗೊಳ್ಳುವ ಪವನ ಶಕ್ತಿಯೋಜನೆಗಳನ್ನು ಪರಿಸರ ಪರಿಣಾಮ ಅಂದಾಜು ಘೋಷಣೆಯ ವ್ಯಾಪ್ತಿಯಡಿಗೆ ತರುವುದು ಮತ್ತು ಅಂದಾಜು ಪ್ರಕ್ರಿಯೆ ನಂತರ ತೀರ್ಮಾನ ಕೈಗೊಳ್ಳುವುದು
- ಕಟ್ಟುನಿಟ್ಟಾಗಿ ಕೆಂಪು ಮಾದರಿ ಕೈಗಾರಿಕೆಗಳನ್ನು ಈ ಪ್ರದೇಶದಲ್ಲಿ ನಿಷೇಧಿಸುವುದು. ಕಡಿಮೆ ಪರಿಸರ ಪರಿಣಾಮಗಳನ್ನುಂಟುಮಾಡುವ ಕೈಗಾರಿಕೆಗಳಿಗೆ ಮಾತ್ರ ಅವಕಾಶ ಕಲ್ಪಿಸುವುದು.
- 20,000 ಚ.ಮೀ.ಗಿಂತ ಹೆಚ್ಚಾಗಿರುವ ಕಟ್ಟಡಗಳಿಗೆ ಮತ್ತು ನಿರ್ಮಾಣಗಳಿಗೆ ಈ ಪ್ರದೇಶದಲ್ಲಿ ಅವಕಾಶವಿಲ್ಲ.ನಗರ ಬಡಾವಣೆ ಮತ್ತು ಟೌನ್‌ಶಿಪ್ ಯೋಜನೆಗಳನ್ನು ನಿಷೇಧಿಸಲಾಗಿದೆ.
- ಈ ಪ್ರದೇಶದಲ್ಲಿ ಎಲ್ಲ ಮೂಲಸೌಕರ್ಯ ಮತ್ತು ಅಭಿವೃದ್ಧಿ ಯೋಜನೆ ಮುಂಚಿತವಾಗಿ ಅನುಮತಿ ಪಡೆಯಬೇಕು.
- ಜೀವಪರಿಸರಾತ್ಮಕ ಸೂಕ್ಷ್ಮ ಪ್ರದೇಷಗಳ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳು ಜನತೆಯನ್ನು ಮುಂದಿನ ಯೋಜನೆಗಳ ಬಗ್ಗೆ ತೀರ್ಮಾನ ಮಾಡುವಾಗ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.ಎಲ್ಲ ಯೋಜನೆಗಳಿಗೆ ಗ್ರಾಮಸಭೆಗಳ ಪೂರ್ವಭಾವಿ,ಮಾಹಿತಿ ಪೂರ್ಣ ಒಪ್ಪಿಗೆ ಅಗತ್ಯ..
- ಜೀವಪರಿಸರಾತ್ಮಕ ಸೂಕ್ಷ್ಮ ಪ್ರದೇಷಗಳ ಸುಸ್ಥಿರ ಅಭಿವೃದ್ಧಿಗೆ ನಿಭಂಧನೆಗಳನ್ನು ಪರಿಣಾಮಕಾರಿಯಾಗಿ ಜಾರಿಮಾಡಲು ಕೂಡಲೆ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವುದು.

**ಪ್ರತಿಗಳಿಗಾಗಿ ಸಂಪರ್ಕಿಸಿ :**

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ, ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com

ವೆಬ್‌ಸೈಟ್ : www.krossbangalore.com